

**ಕೌದಿ ಹೊಲಿಯುವ ವಿದ್ಯೆ ತಾಯಂದಿರು ತಮ್ಮ ಗಂಡಸರ ವಿರೋಧದ ನಡುವೆಯೂ ಕಾಪಿಟ್ಟುಕೊಂಡು ಬಂದ ಅಮೃತಕಲೆ. ಈ ವಿದ್ಯೆ ಹೇಗೆ, ಯಾವ ಮೂಲೆಯಿಂದ, ಯಾವ ದೇಶದಿಂದ ಭಾರತಕ್ಕೆ ಬಂದಿತೋ ಅಥವಾ ಇಲ್ಲಿಯೇ ಜೀವ ತಳೆಯಿತೋ ಎಂಬ ವಿಷಯದ ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ದುರದೃಷ್ಟದ ಸಂಗತಿಯೆಂದರೆ, ಕರ್ನಾಟಕದ ಯಾವ ವಿಶ್ವವಿದ್ಯಾಲಯವೂ ಇದರ ಕುರಿತ ಸುದೀರ್ಘ ಸಂಶೋಧನೆಯನ್ನು ಕೈಗೆತ್ತಿಕೊಂಡಂತೆ ಕಾಣುವುದಿಲ್ಲ.**

ಬಗ್ಗೆ ನಮಗೆ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ದುರದೃಷ್ಟದ ಸಂಗತಿಯೆಂದರೆ, ಕರ್ನಾಟಕದ ಯಾವ ವಿಶ್ವವಿದ್ಯಾಲಯವೂ ಇದರ ಕುರಿತ ಸುದೀರ್ಘ ಸಂಶೋಧನೆಯನ್ನು ಕೈಗೆತ್ತಿಕೊಂಡಂತೆ ಕಾಣುವುದಿಲ್ಲ. ಆದರೆ ಇದೊಂದು ಬಹು ಪುರಾತನ ಕಲಾಪ್ರಕಾರ ಎನ್ನುವುದು ಮಾತ್ರ ತಿಳಿಯುತ್ತದೆ. 'ಕೌದಿ' ಹೊಲಿಯುವ ವಿದ್ಯೆಯನ್ನು ಕುಲಕಸುಬಾಗಿ ಸ್ವೀಕರಿಸಿದ ಗೊಂದಲಿಗ, ಶಿಳ್ಳೇಕ್ಯಾತ ಅಲೆಮಾರಿ ಸಮುದಾಯದವರು, 'ಒಂಬತ್ತು ತಲೆಮಾರಿನಿಂದಲೂ ಮಾಡ್ತಾ ಅದೀವ್ರಿ...' ಅನ್ನುತ್ತಾರೆ.

ಮನೆಯವರೆಲ್ಲಾ ಉಟ್ಟು ಸಾಕಾದ ಬಟ್ಟೆಗಳನ್ನು ನಮ್ಮ ಹಿರಿಯರು ಎಂದೂ ಮನೆಯಿಂದ ಹೊರಕ್ಕೆ ಎಸೆಯುವ ಸ್ವಭಾವವನ್ನು ರೂಢಿಸಿಕೊಂಡವರಲ್ಲ. ಸೀರೆ, ಕುಬುಸ, ಅಂಗಿ, ಧೋತ್ರ, ದಾವಣಿ, ಲಂಗ – ಅಷ್ಟೇ ಏಕೆ, ಪಟ್ಟೆ ಪಟ್ಟೆ ಒಳಚಡ್ಡಿಯನ್ನೂ ಅವರಿಗೆ ಕಸವೆಂದು ಪರಿಗಣಿಸಲು ಮನಸ್ಸಾಗುತ್ತಿರಲಿಲ್ಲ. ಬಡತನದ ಬೇಗೆಯಲ್ಲಿಯೇ ಬೆಳೆದ ಭಾರತದ ಜನಸಾಮಾನ್ಯರು ವರ್ಷಕ್ಕೆ ಒಂದೋ ಎರಡೋ ಜೊತೆ ಬಟ್ಟೆಯನ್ನು ಕೊಳ್ಳುವುದಕ್ಕೇ ಏದುಸಿರು ಬಿಡುತ್ತಿದ್ದರು. ಐದಾರು ವರ್ಷ ಈ ಬಟ್ಟೆಗಳನ್ನು ಪ್ರೀತಿಯಿಂದ ಉಟ್ಟು, ಅವು ಬಿಗಿಯತೊಡಗಿದರೆ ಅಥವಾ ಪಿಸಿಯತೊಡಗಿದರೆ ಬೇರೆಯ ದಾರಿಯಿಲ್ಲದೆ ಅವನ್ನು ಮೂಲೆಗೆ ಹಾಕಬೇಕಿತ್ತು. ಅಂತಹ ಹಳೆಯ ಬಟ್ಟೆಗಳನ್ನು ಬಿಸುಟದೆ ನಮ್ಮ ತಾಯಂದಿರು ಜತನದಿಂದ ಅವುಗಳ ಒಂದು ಗಂಟು ಮಾಡಿ ಅಟ್ಟದಲ್ಲಿ ಇಡುತ್ತಿದ್ದರು. ಇದನ್ನೇ 'ಅರಿವು ಗಂಟು' ಎಂದು ಕರೆಯುವುದು. ('ಲ್ಯಾವಿ ಗಂಟು' ಎನ್ನುವ ವಿಚಿತ್ರ ಹೆಸರೂ ಇದಕ್ಕಿದೆ). ಈ ಗಂಟು ಸುಮಾರು ದೊಡ್ಡದಾಯಿತೆಂದರೆ ಒಂದು ಹೊಸ ಕೌದಿ ಹೊಲಿಯಬಹುದು ಎಂಬ ಉತ್ಸಾಹ ಅವರಲ್ಲಿ ಮೂಡುತ್ತಿತ್ತು. ತಕ್ಷಣ ಅವರ ಊರಿನ ಹೆಂಗಳೆಯರಿಗೆಲ್ಲಾ ಕರೆ ಹೋಗಿ, ಒಳ್ಳೆಯ ಮುಹೂರ್ತವಿರುವ ಒಂದು ಖಾಲಿ ಮಧ್ಯಾಹ್ನ ಎಲ್ಲರೂ ಸೇರಿ, ಕೌದಿ ಹೊಲಿಗೆ ಶುರು ಮಾಡಿಬಿಡುತ್ತಿದ್ದರು.

ಹಳೆಯ ಬಟ್ಟೆಗಳ ಹಲವು ಪದರಗಳನ್ನು ಒಂದರ ಮೇಲೊಂದು ಸೇರಿಸಿ ದಪ್ಪನೆಯ ಕೌದಿ ಮಾಡುತ್ತಾರೆ. ಕೆಳಗಿನ ಎರಡು ಮೂರು ಪದರಗಳು ಇಡೀ ಒಂದು ಸೀರೆ ಅಥವಾ ಧೋತ್ರದಂತಹ ಏಕವಸ್ತ್ರವನ್ನು ಹೊಂದಿದ್ದರೆ, ಕೊನೆಯ ಮೇಲಿನ ಪದರವು ಬಣ್ಣಬಣ್ಣದ ಬಟ್ಟೆಯ ತುಣುಕುಗಳಿಂದ ಕಲಾವಿದರ ಮನೋಧರ್ಮಕ್ಕೆ ತಕ್ಕಂತೆ ಜೋಡಣೆಯಾಗುತ್ತಾ, ಮಧ್ಯದಲ್ಲಿ ಕೌದಿ ದಪ್ಪವಾಗುವುದಕ್ಕೆ ಮತ್ತಷ್ಟು ಬಟ್ಟೆಯ ತುಂಡುಗಳು ಸಮತಟ್ಟಾಗಿ ಸೇರಿಸಿ, ಎಲ್ಲವನ್ನೂ ಗಟ್ಟಿದಾರದ ಸರಳ ಹೊಲಿಗೆಗಳಿಂದ ಜೋಡಿಸಲಾಗುತ್ತದೆ. ಕಂಪ್ಯೂಟರ್ ಜಗತ್ತಿನಲ್ಲಿ ಜನಪ್ರಿಯವಾಗಿರುವ **'three tier technology'** ತರಹ ಈ ಕೌದಿ ಹೊಲಿಸಿಕೊಳ್ಳುತ್ತದೆ. ಈ ಕಲಾಕೃತಿ ಕಲಾವಿದರ ಮನೋಧರ್ಮ ಮತ್ತು ಲಭ್ಯವಿರುವ ಬಟ್ಟೆಗಳಿಗೆ ತಕ್ಕಂತೆ ರಚನೆಯಾಗುತ್ತದಾದ್ದರಿಂದ, ಪ್ರತಿಯೊಂದು ಕೌದಿಯೂ ಅನನ್ಯ ರೂಪವನ್ನು ಪಡೆಯುತ್ತದೆ. ಬಹುತ್ವವನ್ನು ಯಾವತ್ತೂ ಬೆಳೆಸಿ ಪೋಷಿಸಿದ ಭಾರತಕ್ಕೆ ರೂಪಕವಾಗುವಂತೆ ಕೌದಿಯು ಹಲವು ಬಣ್ಣದ, ಹಲವು ಗಾತ್ರದ, ಹಲವು ಜನರ ಬಟ್ಟೆಯ ತುಣುಕುಗಳಿಂದ ಸೇರಿ ಆದ ಪ್ರೀತಿಯ ಹೊದಿಕೆಯಾಗಿದೆ.

'ಆ ತುಂಡು ನನ್ನ ಹಿರೇ ಮಗಳ ಸೀರೆದಪ್ಪ... ಆ ಸೀರೆ ಕಂಡರೆ ಆಕಿಗೆ ಭಾಳ ಇಷ್ಟ ಇತ್ತು. ಎರಡನೇ ಹಡವಣಿಗಿನಾಗೆ ಮೊಮ್ಮಗನ್ನ ಕೈಗಿತ್ತು ಕಣ್ಣು ಮುಚ್ಚಿದಳು...' ಎಂದು ಹಿರಿಯ ಮಹಿಳೆಯೊಬ್ಬರು ಕೌದಿಯ ಮೇಲ್ಪದರದ ಬಟ್ಟೆಯ ತುಣಕೊಂದನ್ನು ತೋರಿಸುತ್ತಾ ಹನಿಗಣ್ಣಾಗುವಾಗ, ಆ ಹೊದಿಕೆಯ ತುಂಬಾ ಕೂಡಿರುವ ಪ್ರೀತಿಯ ಕಥೆಗಳು ಅರ್ಥವಾಗುತ್ತವೆ. ಮೊದಲನೆ ಮಗಳು ಹುಟ್ಟಿದಾಗ ನಾಮಕರಣಕ್ಕೆ ತಂದ ಸೀರೆಯ ತುಣುಕು, ಮಗ ಮೊದಲ ಸಂಬಳದಲ್ಲಿ ಕೊಡಿಸಿದ ಸೀರೆಯ ತುಣುಕು, ಕಾಡಿದ ಅತ್ತೆಯು ಕೊನೆಗಾಲದಲ್ಲಿ ಹಟ ಹಿಡಿದು ಕೊಡಿಸಿಕೊಂಡರೂ ಹೆಚ್ಚು ಉಡಲಾಗದೆ ತೀರಿಕೊಂಡಾಗ ಉಳಿದ ಸೀರೆಯ ಸೆರಗು, ಕಬಡ್ಡಿ ಆಟದಲ್ಲಿ ಹರಿದು ಹೋದ ಮಗನ ಅಂಗಿಯ